**ಆಕಾಶವಾಣಿ 05.07.2024**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **'ವ್ಯಾಜ್ಯ ಮುಕ್ತ ಗ್ರಾಮ'; ಕಾನೂನು ನೀತಿ 2023ಕ್ಕೆ ಸಚಿವ ಸಂಪುಟ ಅನುಮೋದನೆ – ಸಚಿವ ಎಚ್.ಕೆ. ಪಾಟೀಲ.**
- **ಡೆಂಘಿ ನಿಯಂತ್ರಣಕ್ಕೆ, ರಾಜ್ಯಾದ್ಯಂತ ಸಮರೋಪಾದಿ ಕ್ರಮ – ದಿನೇಶ್ ಗುಂಡೂರಾವ್.**
- **'ಸಂಪೂರ್ಣತಾ ಅಭಿಯಾನ'; ಕೇಂದ್ರದ ನೀತಿ ಆಯೋಗದಿಂದ, 90 ದಿನಗಳ ಸುಸ್ಥಿರ ಅಭಿವೃದ್ಧಿ ಆಂದೋಲನ.**
- **ಶಿವಮೊಗ್ಗದ ದೇವಕಾತಿಕೊಪ್ಪದಲ್ಲಿ ನಾಳೆಯಿಂದ, ರಾಜ್ಯ ಮಟ್ಟದ ರೋಲರ್ ಸ್ಕೇಟಿಂಗ್ ರೋಡ್ ರೇಸ್ ಪಂದ್ಯಾವಳಿ.**
- **ರಾಜ್ಯದ ದಕ್ಷಿಣ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಭಾರೀ ಮಳೆ; ಆರೆಂಜ್ ಅಲರ್ಟ್ ಘೋಷಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಎಚ್ಕೆ/ಸಂಪುಟ/ಸಭೆ**

**'ವ್ಯಾಜ್ಯ ಮುಕ್ತ ಗ್ರಾಮ' ನಿರ್ಮಿಸುವ ಸದುದ್ದೇಶದಿಂದ, ರಾಜ್ಯದಲ್ಲಿ ಕಾನೂನು ನೀತಿ 2023ನ್ನು ನಿರೂಪಿಸಲಾಗಿದ್ದು, ಸಚಿವ ಸಂಪುಟ ಅನುಮತಿಸಿದೆ ಎಂದು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ.**

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ, ಬೆಂಗಳೂರಿನಲ್ಲಿ ಸಚಿವರು ಸುದ್ದಿಗೋಷ್ಠಿ ನಡೆಸಿದರು.**

**ಕಾನೂನು ಶಿಕ್ಷಣ ನಿರ್ದೇಶನಾಲಯ, ವಕೀಲರ ತರಬೇತಿ ಅಕಾದೆಮಿ ಸ್ಥಾಪನೆ, ಸರ್ಕಾರಕ್ಕೆ ತಪ್ಪು ಸಲಹೆ ನೀಡುವುದರ ವಿರುದ್ಧ ಉತ್ತರದಾಯಿತ್ವ ನಿಗದಿ ಮಾಡಲಾಗಿದೆ ಎಂದು, ಅವರು ಹೇಳಿದರು.**

<><><>

**ಆನೇಕಲ್, ಹೊಸಕೋಟೆ, ಖಾನಾಪುರ, ನೆಲಮಂಗಲ, ಶಿರಹಟ್ಟಿ, ಶೃಂಗೇರಿ ಹಾಗೂ ಯಳಂದೂರು ತಾಲೂಕುಗಳಲ್ಲಿ, 256 ಕೋಟಿ 15 ಲಕ್ಷ ರೂಪಾಯಿ ವೆಚ್ಚದಲ್ಲಿ, 100 ಹಾಸಿಗೆಗಳ ಸಾಮರ್ಥ್ಯದ ತಾಲೂಕು ಆಸ್ಪತ್ರೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದ್ದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಸಂಪುಟ ಸಭೆ ಬಳಿಕ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ, ಪ್ರಕಟಿಸಿದ್ದಾರೆ.**

**ಕೊಪ್ಪಳ ಜಿಲ್ಲೆ, ತಳಕಲ್ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ, 2ನೇ ಹಂತದ ಕಾಮಗಾರಿ ಮೊತ್ತ 59 ಕೋಟಿ 32 ಲಕ್ಷ ರೂಪಾಯಿಗೆ, ಪರಿಷ್ಕೃತ ಅನುಮೋದನೆ ನೀಡಲಾಗಿದೆ;**

ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕಿನ, ರನ್ನ ನಗರದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು, 30 ವರ್ಷಗಳ ಅವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡಲು, ಸಚಿವ ಸಂಪುಟ ಅನುಮೋದಿಸಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ/ಮು.ಮಂ. ಎಕ್ಸ್ ಖಾತೆ

ದಿನೇಶ್/ಆರೋಗ್ಯ

ಡೆಂಘಿ ನಿಯಂತ್ರಿಸುವ ಕುರಿತು, ರಾಜ್ಯದ ಎಲ್ಲ 31 ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಸಿ.ಇ.ಒ.ಗಳು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳೊಂದಿಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್, ವಿಡಿಯೋ ಸಂವಾದದ ಮೂಲಕ, ಸಭೆ ನಡೆಸಿದರು.

ಡೆಂಘಿ ಹೆಚ್ಚಿರುವ ಪ್ರದೇಶದಲ್ಲಿ, 'ಫಿವರ್ ಕ್ಲಿನಿಕ್' ಸ್ಥಾಪನೆ, ತೀವ್ರ ಜ್ವರದ ಲಕ್ಷಣ ಕಂಡುಬರುವ ಎಲ್ಲರಿಗೂ, ಡೆಂಘಿ ಪತ್ತೆ ಪರೀಕ್ಷೆ, ಡೆಂಘಿ ಕಂಡುಬಂದಲ್ಲಿ ಅಗತ್ಯ ಚಿಕಿತ್ಸೆ ನೀಡಲು, ಸಮರೋಪಾದಿ ಕ್ರಮಕ್ಕೆ ಅವರು ಸೂಚಿಸಿದರು.

<><><>

ಧಾರವಾಡ ಜಿಲ್ಲೆಯಲ್ಲಿ, ಪ್ರತಿ ಶುಕ್ರವಾರವನ್ನು ಈಡೀಸ್ ಸೊಳ್ಳೆ ನಿರ್ಮೂಲನಾ ದಿನವಾಗಿ ಆಚರಿಸಲಾಗುತ್ತಿದೆ. ಈಡೀಸ್ ಲಾರ್ವೆ ನಿರ್ಮೂಲನಾ ಅಭಿಯಾನ ಹಾಗೂ ಡೆಂಘಿ ವಿರುದ್ಧ ಜನ ಜಾಗೃತಿ ಜಾಥಾ, ಇಂದು ಕೆಲಗೇರಿ ಗ್ರಾಮದಲ್ಲಿ ಆಯೋಜಿಸಲಾಗಿದೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಇಲ್ಲಿಯ ವರೆಗೆ ಡೆಂಘಿ ಜ್ವರದ 92 ಪ್ರಕರಣಗಳು ವರದಿಯಾಗಿವೆ ಎಂದು, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ತಿಳಿಸಿದ್ದಾರೆ.

ಹರ್ಷ/ಹೊಂಗಲ್/ಸಚಿವರ ಎಕ್ಸ್ ಜಾಲತಾಣ ಖಾತೆ/ಟಿಟಿಸಿ ಚಿಕ್ಕಬಳ್ಳಾಪುರ/ಕೆ.ವಾ.ಇ.ಧಾ.

ಆಶೋತ್ತರ/ವಲಯ

ಸುಸ್ಥಿರ ಅಭಿವೃದ್ಧಿಯ 6 ಪ್ರಮುಖ ಮಾನದಂಡಗಳನ್ನು ಸಾಧಿಸಲು, ಕೇಂದ್ರದ ನೀತಿ ಆಯೋಗ, ನಿನ್ನೆ ಗುರುವಾರದಿಂದ ಬರುವ ಸೆಪ್ಟೆಂಬರ್ 30 ರ ವರೆಗೆ, 90 ದಿನಗಳ 'ಸಂಪೂರ್ಣತಾ ಅಭಿಯಾನ'ವನ್ನು ಕೈಗೊಂಡಿದೆ.

ದೇಶದ ಒಟ್ಟು 112 ಆಶೋತ್ತರ ಜಿಲ್ಲೆಗಳು ಮತ್ತು 500 ಆಶೋತ್ತರ ವಲಯಗಳಲ್ಲಿ, ಸುಸ್ಥಿರ ಅಭಿವೃದ್ಧಿಯ 6 ಮಾನದಂಡಗಳನ್ನು ಸಾಧಿಸುವ ಗುರಿಯನ್ನು, ಈ ಅಭಿಯಾನ ಹೊಂದಿದೆ.

ಗರ್ಭಿಣಿಯರ ಆರೈಕೆಗೆ ನೋಂದಣಿ, ಪೂರಕ ಪೌಷ್ಟಿಕ ಆಹಾರ ಒದಗಿಸುವುದು, ಮಧುಮೇಹ, ಅಧಿಕ ರಕ್ತದೊತ್ತಡ ಹೊಂದಿರುವ ವ್ಯಕ್ತಿಗಳ ಆರೋಗ್ಯ ಪರೀಕ್ಷೆ, ಮಣ್ಣಿನ ಆರೋಗ್ಯ ಕಾರ್ಡ್‌ಗಳ ವಿತರಣೆ ಹಾಗೂ ಸ್ವ-ಸಹಾಯ ಗುಂಪುಗಳಿಗೆ

ಆರ್ಥಿಕ ನೆರವು ನೀಡುವ ಕಾರ್ಯಕ್ರಮಗಳನ್ನು, ಕಾಲಮಿತಿಯಲ್ಲಿ ಅನು ಷ್ಠಾನಗೊಳಿಸಿ, ಪರಿಣಾಮ ವಿಶ್ಲೇಷಿಸಲು ಯೋಜಿಸಲಾಗಿದೆ.

ಹರ್ಷ/ಹೊಂಗಲ್/ಪಿಐಬಿ/ನ್ಯೂಸ್ ಆನ್ ಏರ್

ಮಹಿಳೆ/ನೆರವು

ಬೆಂಗಳೂರು ನಗರದ 60 ಸ್ಥಳಗಳಲ್ಲಿ, ಪೊಲೀಸ್ ಇಲಾಖೆ 'ನೆರವು ಸಹಾಯ ಕೇಂದ್ರ' ತೆರೆದು, ಮಹಿಳೆಯರು, ಮಕ್ಕಳ ಸುರಕ್ಷತೆ ಖಾತ್ರಿ ಪಡಿಸಲು, ಕಾಳಜಿ ವಹಿಸಿದೆ.

ನಗರ ವ್ಯಾಪ್ತಿಯ ಜನ ಸಂದಣಿ ಪ್ರದೇಶ, ಮಹಿಳೆಯರು ಸಂಚರಿಸುವ ನಿರ್ಜನ ಪ್ರದೇಶ, ಮಹಿಳಾ ವಸತಿ ನಿಲಯ, ಸಾಫ್ಟ್‌ವೇರ್ ಕಂಪೆನಿಗಳಿರುವ ಹಾಗೂ ಸೂಕ್ಷ್ಮ ಪ್ರದೇಶಗಳೆಂದು ಗುರುತಿಸಲ್ಪಟ್ಟ ಪ್ರದೇಶಗಳಲ್ಲಿ, ನೆರವು ಕೇಂದ್ರಗಳನ್ನು ತೆರೆಯಲಾಗಿದೆ. ಸದ್ಯ ಈ ಕೇಂದ್ರಗಳಲ್ಲಿ, ಪ್ರತ್ಯೇಕ ಮಹಿಳಾ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ.

ಪೊಲೀಸ್/ಆಯುಕ್ತ/ಹು–ಧಾ

ಮಾದಕ ದ್ರವ್ಯ ಸೇವನೆ ಮತ್ತು ಸಾಗಣೆ ವಿರುದ್ಧ ಯುವ ಜನರಲ್ಲಿ ಜಾಗ್ರತಿ, ಡ್ರಗ್ಸ್ ಪೆಡ್ಲರ್‌ಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು, ಹುಬ್ಬಳ್ಳಿ, ಧಾರವಾಡ ನೂತನ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಹುಬ್ಬಳ್ಳಿಯ ನವನಗರದಲ್ಲಿ, ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಹುಬ್ಬಳ್ಳಿ, ಧಾರವಾಡದಲ್ಲಿ ಹೆಣ್ಣು ಮಕ್ಕಳ ರಕ್ಷಣೆಗಾಗಿ, ಚೆನ್ನಮ್ಮ ಕಾರ್ಯಪಡೆ ಇದೆ. ಸೈಬರ್ ಅಪರಾಧ ಸೇರಿದಂತೆ, ಹೆಣ್ಣುಮಕ್ಕಳು ತಮ್ಮ ತೊಂದರೆಗಳ ಬಗ್ಗೆ 112ಕ್ಕೆ ಕರೆ ಮಾಡಿ ದೂರು ನೀಡುವಂತೆ, ಕೋರಿದರು.

<><><>

ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಧ್ವನಿ 38 ಸೆಕೆಂದುಗಳು

<><><>

ಹರ್ಷ/ಹೊಂಗಲ್/ಕೆ.ವಾ.ಇ.ಧಾ/ರಾ.ಸ.ಕೇಂ.ಹು./ಪಿಟಿಸಿ ಧಾರವಾಡ/ವಿವೇಕ್

<><><>

ಮಣ್ಣೆತ್ತಿನ ಅಮಾವಾಸ್ಯೆ

ಇಂದು ಮಣ್ಣೆತ್ತಿನ ಅಮಾವಾಸ್ಯೆ. ರೈತಾಪಿ ಜನ ತಮ್ಮ ಬದುಕಿಗೆ ಆಸರೆಯಾಗಿರುವ ಎತ್ತುಗಳನ್ನು ಪೂಜಿಸಿ, ಸಂಭ್ರಮಪಡುವ ಹಬ್ಬ.

ವರ್ಷಾರಂಭದಿಂದ ಒಟ್ಟು ಐದು ಬಾರಿ ಮಣ್ಣಿನ ಪೂಜೆಯನ್ನು ನೆರವೇರಿಸುವ ಸಂಪ್ರದಾಯ ಉತ್ತರ ಕರ್ನಾಟಕ ಭಾಗದಲ್ಲಿದೆ.

ಆಷಾಢ, ಶ್ರಾವಣ ಮತ್ತು ಭಾದ್ರಪದ ಮಾಸಗಳಲ್ಲಿ ಮಣ್ಣಿನ ಪೂಜೆ ಶ್ರದ್ಧಾ–ಭಕ್ತಿಯಿಂದ ಮಾಡಲಾಗುತ್ತದೆ.

ಮಣ್ಣೆತ್ತು, ಗುಳ್ಳವ್ವ, ಹುತ್ತಪ್ಪ, ಗಣಪ್ಪ ಹಾಗೂ ಜೋಕುಮಾರ ಈ ಐದು ಮಣ್ಣಿನಿಂದ ಮಾಡಿದ ದೈವಗಳನ್ನು ಮೂರು ಮಾಸಗಳಲ್ಲಿ ಜನರು ಪೂಜಿಸುತ್ತಾರೆ.

ಹರ್ಷ/ಹೊಂಗಲ್

ರುದ್ರಪ್ಪ/ದೇವಲ್ ಗಾಣಗಾಪುರ

ಕಲಬುರಗಿ ಜಿಲ್ಲೆ, ಅಫಜಲಪೂರ ತಾಲೂಕಿನ, ಸುಕ್ಷೇತ್ರ ದತ್ತ ಮಹಾರಾಜರ ದೇವಲ ಗಾಣಗಾಪೂರ, ವಾರಾಣಸಿ ಮಾದರಿಯಲ್ಲಿ ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು, ವಿಧಾನಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ದೇವಲ ಗಾಣಗಾಪೂರ ದೇವಸ್ಥಾನ ಅಭಿವೃದ್ಧಿ ಕುರಿತಂತೆ ನಡೆದ ಅಧಿಕಾರಿಗಳ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

83 ಕೋಟಿ 52 ಲಕ್ಷ ರೂಪಾಯಿ ವೆಚ್ಚದಲ್ಲಿ ದೇಗುಲವನ್ನು ಅಭಿವೃದ್ಧಿಪಡಿಸಲು, ಕೇಂದ್ರದ ಪ್ರವಾಸೋದ್ಯಮ ಇಲಾಖೆಗೆ, 'ಪ್ರಸಾದ' ಯೋಜನೆ ಅಡಿ, ಕಲಬುರಗಿ ಜಿಲ್ಲಾಡಳಿತ ಪ್ರಸ್ತಾವ ಸಲ್ಲಿಸಿದೆ ಎಂದರು.

ಹರ್ಷ/ಹೊಂಗಲ್/ಕೆ.ವಾ.ಇ.ಕ

ರೋಲರ್/ಸ್ಕೇಟಿಂಗ್ ಪಂದ್ಯ

ರಾಜ್ಯ ರೋಲರ್ ಸ್ಕೇಟಿಂಗ್ ಅಸೋಸಿಯೇ 'ನ್, ಶಿವಮೊಗ್ಗದ ದೇವಕಾತಿಕೊಪ್ಪ ಕೈಗಾರಿಕಾ ಪ್ರದೇಶದಲ್ಲಿ ನಾಳೆ ಮತ್ತು ನಾಡಿದ್ದು, ರಾಜ್ಯ ಮಟ್ಟದ ರೋಲರ್ ಸ್ಕೇಟಿಂಗ್ ರೋಡ್ ರೇಸ್ ಪಂದ್ಯಾವಳಿ, ಆಯೋಜಿಸಿದೆ.

‘ನಮ್ಮ ಶಿವಮೊಗ್ಗ ರೋಲರ್ ಅಸೋಸಿಯೇ ’ನ್’ ಸಹಯೋಗದಲ್ಲಿ, ಆಯೋಜಿತ ರೋಲರ್ ಸ್ಕೇಟಿಂಗ್ ಪಂದ್ಯಾವಳಿಯಲ್ಲಿ, ಐನೂರಕ್ಕೂ ಹೆಚ್ಚು ಕ್ರೀಡಾಪಟುಗಳು, ಎರಡು ಸಾವಿರಕ್ಕೂ ಹೆಚ್ಚು ಪೋ ’ಕರು ಆಗಮಿಸುತ್ತಿದ್ದಾರೆ ಎಂದು, ಸಂಸ್ಥೆಯ ಅಧ್ಯಕ್ಷ ಮೋಹನ್ ಕುಮಾರ್ ಕೆ.ಹೆಚ್ ಹಾಗೂ ಕಾರ್ಯದರ್ಶಿ ಎಂ. ರವಿ ತಿಳಿಸಿದ್ದಾರೆ.

ಹರ್ಷ/ಹೊಂಗಲ್/ಎಂ.ರವಿ ಪ್ರಕಟಣೆ

ಡಿಕೆಶಿ/ಹಾರೈಕೆ

ಜುಲೈ 26 ರಿಂದ ಆರಂಭವಾಗಲಿರುವ, ಪ್ಯಾರಿಸ್ ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ, ಬೆಂಗಳೂರು ಮೂಲದ ಈಜು ಪಟುಗಳಾದ, ಶ್ರೀಹರಿ ನಟರಾಜ್ ಹಾಗೂ ಧಿನಿಧಿ ದೇಸಿಂಗು ಅವರಿಗೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಶುಭ ಹಾರೈಸಿದ್ದಾರೆ. ದೇಶಕ್ಕೆ ಕೀರ್ತಿ ತರಲಿ ಎಂದು ಆಶಿಸಿದ್ದಾರೆ.

14 ವ ’ಣದ ಧಿನಿಧಿ ಅವರು, ಮಹಿಳೆಯರ ವಿಭಾಗದಲ್ಲಿ, 23 ವ ’ಣದ ಶ್ರೀಹರಿ ಅವರು ಪುರು ’ರ ವಿಭಾಗದಲ್ಲಿ ಆಯ್ಕೆಯಾಗಿದ್ದು, ಕನ್ನಡ ನೆಲದ ಎರಡು ಪ್ರತಿಭೆಗಳು ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಹರ್ಷ/ಹೊಂಗಲ್/ಡಿಕೆಶಿ ಎಕ್ಸ್ ಖಾತೆ

ಹೆಬ್ಬಾಳ್ಕರ್/ಉಡುಪಿ

ಉಡುಪಿ ಜಿಲ್ಲೆಯ ಕೆಲವೆಡೆ ಸತತ ಮಳೆಯಿಂದಾದ ಹಾನಿಯಾಗಿದ್ದು, ಅಧಿಕಾರಿಗಳು ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ, ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಆದೇಶಿಸಿದ್ದಾರೆ.

ಅಮಾವಾಸ್ಯೆ ಬಯಲು ಸೇರಿದಂತೆ, ಕೆಲವೆಡೆ ಮಳೆ, ಗಾಳಿಯಿಂದ ಉಂಟಾಗಿರುವ ಹಾನಿ ಕುರಿತು, ಸಚಿವರು ಬೆಂಗಳೂರಿನಿಂದ ಮಾಹಿತಿ ಪಡೆದರು.

<><><>

ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕಿನ, ಆಗುಂಬೆ ಘಟ್ಟದ ನಾಲ್ಕನೇ ತಿರುವಿನಲ್ಲಿ ಬೃಹತ್ ಮರ ಉರುಳಿ ಬಿದ್ದು, ವಾಹನವೊಂದು ನಜ್ಜುಗುಜ್ಜಾಗಿ, ನಾಲ್ವರಿಗೆ ಗಾಯಗಳಾಗಿವೆ.

<><><>

ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ, ಶೃಂಗೇರಿ, ಕಳಸ, ಬಾಳೇಹೊನ್ನೂರು, ಕೊಟ್ಟಿಗೆಹಾರದಲ್ಲಿ, ಉತ್ತಮ ಮಳೆಯಾಗುತ್ತಿದೆ.

ಚಾರ್ಮಾಡಿ ಘಾಟ್ ರಸ್ತೆಯಲ್ಲಿ ಬಿರುಕು ಕಾಣಿಸಿಕೊಂಡಿದೆ. ತುಂಗಾ, ಭದ್ರಾ ಮತ್ತು ಹೇಮಾವತಿ ನದಿಗಳಲ್ಲಿ, ಒಳ ಹರಿವು ಹೆಚ್ಚಿದೆ. ಕಳಸ, ಹೊರನಾಡು ಸಂಪರ್ಕಿಸುವ ಹೆಬ್ಬಾಳೆ ಸೇತುವೆ ಮುಳುಗುವ ಹಂತಕ್ಕೆ ತಲುಪಿದೆ.

ಶೃಂಗೇರಿಯಲ್ಲಿ ತುಂಗಾ ನದಿ, ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿದೆ.

<><><>

ಈ ಮಧ್ಯೆ, ರಾಜ್ಯದ ದಕ್ಷಿಣ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಿಗೆ, 7ನೇ ತಾರೀಖಿನ ವರೆಗೆ, ಭಾರೀ ಮಳೆ ಸಾಧ್ಯತೆ ಹಿನ್ನೆಲೆ, ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ.

ಹರ್ಷ/ಹೊಂಗಲ್/ಟಿಟಿಸಿ ಉಡುಪಿ/ಶಿವಮೊಗ್ಗ/ಚಿಕ್ಕಮಗಳೂರು/ಸಚಿವರ ಎಕ್ಸ್ ಜಾಲತಾಣ ಖಾತೆ/ಎಂಡಿ ಪ್ರ.

ಮಳೆ/ನೆರೆ

ಉತ್ತರಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಕುಮಟಾ, ಹೊನ್ನಾವರ ಹಾಗೂ ಭಟ್ಕಳ ಭಾಗದಲ್ಲಿ, ಸತತ ಧಾರಾಕಾರ ಮಳೆ ಸುರಿಯುತ್ತಿದೆ. ನಿರಂತರ ಮಳೆಯಿಂದ, ಹೊನ್ನಾವರ ತಾಲೂಕಿನ ಗುಂಡಬಾಳ ನದಿ ಮೈದುಂಬಿ ಹರಿಯುತ್ತಿದೆ. ಇಂದು ಶಾಲೆ-ಕಾಲೇಜುಗಳಿಗೆ ರಜೆ ಘೋಷಿಸಿ, ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ಆದೇಶಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಹೊನ್ನಾವರ ತಾಲೂಕಿನಲ್ಲಿ ನಿರಂತರ ಮಳೆಯಾಗುತ್ತಿರುವ ಪರಿಣಾಮ, ಭಾಸ್ಕೇರಿ ಸಮೀಪ, ರಾಷ್ಟ್ರೀಯ ಹೆದ್ದಾರಿ-69 ರಲ್ಲಿ ಗುಡ್ಡ ಕುಸಿದಿದೆ. ಹೊನ್ನಾವರ-ಗೇರುಸೊಪ್ಪ-ಸಾಗರ ನಡುವೆ, ಸಂಚಾರ ಸ್ಥಗಿತಗೊಂಡಿದೆ. ಹೆದ್ದಾರಿಯಲ್ಲಿನ ಮಣ್ಣಿನ ರಾಶಿ ತೆರವು ಕಾರ್ಯ ನಡೆಯುತ್ತಿದೆ. ಸತತ ಮಳೆ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಸಂಚಾರ ಸ್ಥಗಿತಗೊಂಡಿದ್ದರಿಂದ, ಹೆದ್ದಾರಿಯ ಎರಡು ಕಡೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

<><><>

ಉತ್ತರಕನ್ನಡ ಜಿಲ್ಲೆಯ, ಕಾಳಿ ನದಿ ಜಲ ವಿದ್ಯುತ್ ಯೋಜನೆಯ, ಕನ್ದೇರಿ ಅಣೆಕಟ್ಟೆಯ ಗರಿಷ್ಟ ಮಟ್ಟ, 615 ದಶಾಂಶ 50 ಅಡಿಗಳಿದ್ದು, ಒಳ ಹರಿವಿನಲ್ಲಿ ಹೆಚ್ಚಳವಾಗಿದೆ. ಪ್ರಸ್ತುತ ನೀರಿನ ಮಟ್ಟ, 605 ದಶಾಂಶ 85 ಅಡಿಗಳಾಗಿದೆ.

ನದಿಯ ಪಾತ್ರದಲ್ಲಿ ದೋಣಿ ಸಂಚಾರ, ಮೀನುಗಾರಿಕೆ ಮತ್ತು ಇತರೆ ಚಟುವಟಿಕೆಗಳನ್ನು ಮಳೆಗಾಲದ ಅವಧಿಯಲ್ಲಿ ನಡೆಸದಂತೆ, ಸುರಕ್ಷಿತ ಪ್ರದೇಶಕ್ಕೆ ತೆರಳುವಂತೆ, ಕೆ.ಪಿ.ಸಿ ಅಧಿಕಾರಿಗಳು ತಿಳಿಸಿದ್ದಾರೆ.

ಹರ್ಷ/ಹೊಂಗಲ್/ಟಿಟಿಸಿ ಕಾರವಾರ/ಜಿಲ್ಲಾವಾರು ಕ.ವಾ.ಇ.ಕ.

ಈಗ ಸಂಕ್ಷಿಪ್ತ ಸುದ್ದಿಗಳು:

ಸ್ವಾಮಿ ವಿವೇಕಾನಂದರ ಪುಣ್ಯತಿಥಿ ಅಂಗವಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಗೌರವ ನಮನ ಸಲ್ಲಿಸಿದ್ದಾರೆ. ಸ್ವಾಮಿ ವಿವೇಕಾನಂದರ ಸಮೃದ್ಧ ಹಾಗೂ ಪ್ರಗತಿಶೀಲ ಸಮಾಜದ ಕನಸು ಈಡೇರಿಸಲು ಸರ್ಕಾರ ಬದ್ಧವಾಗಿದೆ ಎಂದು ಪ್ರಧಾನಮಂತ್ರಿ ಪ್ರತಿಪಾದಿಸಿದ್ದಾರೆ.

ರಾಜ್ಯ ಮಾನವ ಹಕ್ಕುಗಳ ಆಯೋಗ, ಇದೇ 9 ರಿಂದ 11ನೇ ತಾರೀಖಿನ ವರೆಗೆ, ಗದಗ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ಸಭೆ ನಡೆಸಲಿದೆ.

ಮಂಡ್ಯ ಸಂಸದ ಎಚ್.ಡಿ.ಕುಮಾರಸ್ವಾಮಿ, ಇಂದು ಬೆಳಗ್ಗೆ 10 ಗಂಟೆಗೆ, ಮಂಡ್ಯದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ, ಜನತಾ ದರ್ಶನ ನಡೆಸಲಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ, ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಿತು.

ಅಮರನಾಥ ಯಾತ್ರಾರ್ಥಿಗಳ 5 ಸಾವಿರದ 696 ಸದಸ್ಯರ ತಂಡ, ಜಮ್ಮುವಿನಿಂದ 219 ವಾಹನಗಳಲ್ಲಿ, ಅಶ್ವದಳದ ಬಿಗಿ ಭದ್ರತೆಯಲ್ಲಿ, ಕಾಶ್ಮೀರ ಕಣಿವೆಗೆ ತೆರಳಿತು.

ಭಾರತೀಯ ವಾಯುಪಡೆಯ, ಅಗ್ನಿಪಥ್ ಯೋಜನೆಯಡಿ, ಅಗ್ನಿವೀರ್ ವಾಯು ಸೇವೆಗಾಗಿ, ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಜಾಲತಾಣ – agnipathvayu.cdac.in ಭೇಟಿ ನೀಡಬಹುದು.

ರಾಜ್ಯದಲ್ಲಿ ಪಹಣಿಗಳಿಗೆ ಆಧಾರ್ ಜೋಡಣೆಯಲ್ಲಿ, ದಾವಣಗೆರೆ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ ಎಂದು, ಜಿಲ್ಲಾಧಿಕಾರಿ ಎಂ.ವಿ.ವೆಂಕಟೇಶ್ ತಿಳಿಸಿದ್ದಾರೆ.

ಬೆಂಬಲ ಬೆಲೆ ಯೋಜನೆಯಡಿ, ಪ್ರತಿ ಕ್ವಿಂಟಾಲ್ ಕುಸುಬೆಗೆ 5 ಸಾವಿರದ 800 ರೂಪಾಯಿ ನಿಗದಿಪಡಿಸಲಾಗಿದೆ ಎಂದು, ಗದಗ ಜಿಲ್ಲಾಧಿಕಾರಿ ವೈಶಾಲಿ ತಿಳಿಸಿದ್ದಾರೆ.

ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ, ಗದಗ ಜಿಲ್ಲೆಯ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರಿಗೆ ಶಿಬಿರ, ಇದೇ 8 ರಿಂದ 16ರ ವರೆಗೆ ಜರುಗಲಿದೆ.

ಹರ್ಷ/ಹೊಂಗಲ್/ಜಿಲ್ಲಾವಾರು ಪಿಟಿಸಿ/ಎಕ್ಸ್ ಜಾಲತಾಣ ಖಾತೆ/ಜಿಲ್ಲಾವಾರು ಕ.ವಾ.ಇ.ಕ/ಬೆಂ.

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- 'ವ್ಯಾಜ್ಯ ಮುಕ್ತ ಗ್ರಾಮ'; ಕಾನೂನು ನೀತಿ 2023ಕ್ಕೆ ಸಚಿವ ಸಂಪುಟ ಅನುಮೋದನೆ – ಸಚಿವ ಎಚ್.ಕೆ. ಪಾಟೀಲ.
- ಡೆಂಘಿ ನಿಯಂತ್ರಣಕ್ಕೆ, ರಾಜ್ಯಾದ್ಯಂತ ಸಮರೋಪಾದಿ ಕ್ರಮ – ದಿನೇಶ್ ಗುಂಡೂರಾವ್.
- 'ಸಂಪೂರ್ಣತಾ ಅಭಿಯಾನ'; ಕೇಂದ್ರದ ನೀತಿ ಆಯೋಗದಿಂದ, 90 ದಿನಗಳ ಸುಸ್ಥಿರ ಅಭಿವೃದ್ಧಿ ಆಂದೋಲನ.
- ಶಿವಮೊಗ್ಗದ ದೇವಕಾತಿಕೊಪ್ಪದಲ್ಲಿ ನಾಳೆಯಿಂದ, ರಾಜ್ಯ ಮಟ್ಟದ ರೋಲರ್ ಸ್ಕೇಟಿಂಗ್ ರೋಡ್ ರೇಸ್ ಪಂದ್ಯಾವಳಿ.

- ರಾಜ್ಯದ ದಕ್ಷಿಣ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಭಾರೀ ಮಳೆ; ಆರೆಂಜ್ ಅಲರ್ಟ್ ಘೋಷಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಪ್ರಿಯಾಂಕ್ ಖರ್ಗೆ/ಒಂದೇ ಸೂರು

ರಾಜ್ಯದ ಗ್ರಾಮೀಣ ಭಾಗದ ಜನತೆಗೆ, ಬಾಪೂಜಿ ಸೇವಾ ಕೇಂದ್ರದ ಎಲ್ಲ ಸೇವೆಗಳು, ಈಗ ಜಾಲತಾಣ ಮತ್ತು ಮೊಬೈಲ್ ಮೂಲಕ ಸಹ ಲಭ್ಯ ಎಂದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ತಂತ್ರಜ್ಞಾನದ ಲಾಭವನ್ನು ಗ್ರಾಮೀಣ ಜನತೆಗೂ ತಲುಪಿಸುವಲ್ಲಿ, ಇದು ಮಹತ್ತರ ಹೆಜ್ಜೆಯಾಗಿದೆ ಎಂದು, ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಪ್ರಕಟಿಸಿದ್ದಾರೆ.

ಒಂದೇ ಸೂರಿನಡಿ ಹಲವು ಸೇವೆಗಳು ಎಂಬ ಪರಿಕಲ್ಪನೆಯೊಂದಿಗೆ, ಗ್ರಾಮೀಣ ಜನತೆಗೆ ಎಲ್ಲ ಸರ್ಕಾರಿ ಸೇವೆಗಳನ್ನು, ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕಲ್ಪಿಸಿಕೊಡಲಾಗಿದೆ.

ಹರ್ಷ/ಹೊಂಗಲ್/ಸಚಿವರ ಸಾ.ಜಾ. ಎಕ್ಸ್

ಲಾಲ್‌ಬಾಗ್/ಫಲಪುಷ್ಪ

ಈ ಬಾರಿಯ ಸ್ವಾತಂತ್ರೋತ್ಸವ ಫಲಪು ್ಪ ಪ್ರದರ್ಶನದಲ್ಲಿ, ಸಂವಿಧಾನ ಶಿಲ್ಪಿ, ಭಾರತ ರತ್ನ, ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಲಾಲ್‌ಬಾಗ್‌ನಲ್ಲಿ ರಾರಾಜಿಸಲಿದ್ದಾರೆ.

ಅಂಬೇಡ್ಕರ್ ಥೀಮ್‌ನಡಿ ಫಲಪು ್ಪ ಪ್ರದರ್ಶನ ನಡೆಸಲು, ರಾಜ್ಯ ತೋಟಗಾರಿಕೆ ಇಲಾಖೆ ತೀರ್ಮಾನಿಸಿದೆ.

ಅಂಬೇಡ್ಕರ್ ಅವರ ಪ್ರತಿಮೆ, ಸಂವಿಧಾನ ಕೃತಿ, ಅವರು ಬಾಳಿ ಬದುಕಿದ ಮನೆ, ಅವರ ಆದರ್ಶಗಳನ್ನು ಲಕ್ಷಾಂತರ ಹೂವುಗಳಲ್ಲಿ, ಅನಾವರಣಗೊಳಿಸಿ, ಪ್ರದರ್ಶನವನ್ನು ಅಂದಗೊಳಿಸಲು ಯೋಜಿಸಲಾಗಿದೆ.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ. ಎಕ್ಸ್ ಜಾಲತಾಣ

ಆಸ್ತಿತೆರಿಗೆ/ವಿನಾಯಿತಿ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಪ್ರಸಕ್ತ ಸಾಲಿನ ಆಸ್ತಿ ತೆರಿಗೆಯನ್ನು, ಈ ತಿಂಗಳ ಅಂತ್ಯದ ವರೆಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಿದಲ್ಲಿ, ಶೇಕಡ 5 ರಷ್ಟು ವಿನಾಯಿತಿ ಸಿಗಲಿದೆ.

ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಮನವಿಯಂತೆ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಎಲ್. ರಘುನಾಥ್ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ, ಈ ಕುರಿತು ಪತ್ರ ಬರೆದಿದ್ದರು.

ಪ್ರಸಕ್ತ ಆರ್ಥಿಕ ವರ್ಷದ ಆಸ್ತಿ ತೆರಿಗೆ ಪಾವತಿಗೆ, ಶೇಕಡ 5 ರಷ್ಟು ರಿಯಾಯಿತಿಯನ್ನು ಇದೇ ತಿಂಗಳ 31 ರ ವರೆಗೆ ವಿಸ್ತರಿಸಿ, ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಹರ್ಷ/ಹೊಂಗಲ್/ಕೆ.ವಾ.ಇ. ಎಕ್ಸ್ ಜಾಲತಾಣ

ಲಾಂಚ್

ಶರಾವತಿ ಹಿನ್ನೀರಿನ ಹಸಿರುಮಕ್ಕಿ ಲಾಂಚ್ ಸೇವೆ, ಪುನಾರಂಭಗೊಂಡಿದೆ ಎಂದು, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಮಾಹಿತಿ ನೀಡಿದೆ.

ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಕೊರತೆ ಹಾಗೂ ಸುರಕ್ಷತೆ ದೃಷ್ಟಿಯಿಂದ ಕಳೆದ ಒಂದು ತಿಂಗಳಿಂದ ಸ್ಥಗಿತ ಗೊಳಿಸಲಾಗಿತ್ತು.

ಸಾಗರದಿಂದ, ಕೊಲ್ಲೂರು, ಕುಂದಾಪುರ ತೆರಳುವವರಿಗೆ, ಲಾಂಚ್ ಸೇವೆ ಆರಂಭದಿಂದ ಅನುಕೂಲವಾಗಿದೆ. ಲಿಂಗನಮಕ್ಕಿ ಜಲಾಶಯದ ಮಟ್ಟ ಸದ್ಯ ಸಾವಿರದ 8 ನೂರಾ 90 ಅಡಿಗಳಾಗಿದೆ.

ಹರ್ಷ/ಹೊಂಗಲ್/ಪಿಟಿಸಿ ಶಿವಮೊಗ್ಗ

ಹೆಬ್ಬಾಳ್ಕರ್/ಶಿಕ್ಷಣ

ಅಂಗನವಾಡಿ ಮಕ್ಕಳಿಗೆ ಪಾಟೀಚೀಲ, ಸಮವಸ್ತ್ರ ನೀಡಲು ತೀರ್ಮಾನಿಸಲಾಗಿದ್ದು, ಮಾಂಟೇಸ್ಸರಿ ತರಗತಿಗಳು ಆರಂಭಗೊಂಡ ನಂತರ, ಅಂಗನವಾಡಿ ಹೆಸರನ್ನು ಬದಲಿಸಲು ಚಿಂತನೆ ನಡೆದಿದೆ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ ತಿಳಿಸಿದ್ದಾರೆ.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಫೆಡರೇಷನ್ ವತಿಯಿಂದ, ಬೆಂಗಳೂರಿನಲ್ಲಿ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ತರಗತಿಗಳನ್ನು ಆರಂಭಿಸುವುದರಿಂದ, ಅಂಗನವಾಡಿ ಶಿಕ್ಷಕರಿಗೆ ಯಾವುದೇ ತೊಂದರೆಯಾಗುವುದಿಲ್ಲ; ಮಕ್ಕಳು ಹಾಗೂ ಶಿಕ್ಷಕಿಯರ ಹಿತದೃಷ್ಟಿಯಿಂದ ಸರ್ಕಾರ ತೀರ್ಮಾನಿಸಿದೆ ಎಂದರು.

ಹರ್ಷ/ಹೊಂಗಲ್/ಡಿ ಚಂದನ